ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

ಎಂವಿಸಿ ಸಂಖ್ಯೆ: **118/2019**

RW-4

ದಿನಾಂಕ **17-03-2023** ರಂದು ಈ ಸಾಕ್ಷಿದಾರರು ಹಾಜರಾಗಿ ತಮ್ಮ ಮುಖ್ಯವಿಚಾರಣೆಗೆ ಬದಲಾಗಿ ತಮ್ಮ ಸಾಕ್ಷಿ ಪ್ರಮಾಣಪತ್ರವನ್ನು ಹಾಕುವುದಾಗಿ ನುಡಿದಿದ್ದಾರೆ. ನಂತರ ಈ ಸಾಕ್ಷಿದಾರರನ್ನು ಸಾಕ್ಷಿ ಕಟಕಟೆಗೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ನಂತರ ಸಾಕ್ಷಿದಾರರು ತಮ್ಮ ಸಾಕ್ಷಿ ಪ್ರಮಾಣಪತ್ರವನ್ನು ಕೊಟ್ಟಿದ್ದಾರೆ ಮತ್ತು ಈ ಕೆಳಕಂಡಂತೆ ನುಡಿದಿದ್ದಾರೆ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಮ್ಮ ವಕೀಲರ ಮೂಲಕ ನಾನೇ ಬರೆಸಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿಯನ್ನು ಹಾಕಿದ್ದೇನೆ.

ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯವಿಚಾರಣೆ ಮಾಡಲು ಮಾನ್ಯ ವಕೀಲರು ಅನುಮತಿ ಕೇಳಿದ್ದಾರೆ, ಅನುಮತಿ ನೀಡಿದೆ.

<u>ಮುಂದುವರೆದ ಮುಖ್ಯವಿಚಾರಣೆ **2** ನೇ ಎದುರುದಾರರ ಪರವಾಗಿ ಶ್ರೀ ಕೆ.ಡಿ.ಡಿ, ವಕೀಲರಿಂದ:</u>

1. ಅಧಿಕಾರ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಆರ್-16 ಎಂದು ಗುರುತಿಸಿದೆ.

2. ನಿಆರ್-4 ಎಂದು ಗುರುತು ಆಗಿರುವ ದಾಖಲೆಯನ್ನು ನಮ್ಮ ಸಂಸ್ಥೆಯ ಹಿಂದಿನ ಅಧಿಕಾರಿಯು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ. ಅದೇ ರೀತಿ ನಮ್ಮ ಸಂಸ್ಥೆಯ ಹಿಂದಿನ ಅಧಿಕಾರಿಯ ಮೂಲಕವೇ ನಿಆರ್-5 ದಾಖಲೆಯನ್ನು ಅಂದರೆ investigation report ಅನ್ನು ನಿಶಾನೆಯನ್ನಾಗಿ ಗುರುತಿಸಲಾಗಿದೆ. ಸದರಿ ದಾಖಲೆಯನ್ನು ನನ್ನ ಮೂಲಕವು ಸಹಾ ಹಾಜರುಪಡಿಸಲಾಗಿದೆ ಎಂದು ಈ ನ್ಯಾಯಾಲಯದವರು ಪರಿಗಣಿಸಬೇಕು ಎಂದು ಪ್ರಾರ್ಥಿಸುತ್ತೇನೆ.

3. ನಮ್ಮ ಸಂಸ್ಥೆಯ ಹಿಂದಿನ ಅಧಿಕಾರಿಯ ಮೂಲಕವೇ ನಾವು ನಿಆರ್-3, ನಿಆರ್-4, ನಿಆರ್-5, ನಿಆರ್-6, ನಿಆರ್-7, ನಿಆರ್-12, ನಿಆರ್-13, ನಿಆರ್-14 ಮತ್ತು ನಿಆರ್-15 ದಾಖಲೆಗಳನ್ನು ಹಾಜರುಪಡಿಸಿದ್ದೇವೆ. ಆ ದಾಖಲೆಗಳನ್ನು ಸಹಾ ನನ್ನ ಮೂಲಕವೇ ಹಾಜರುಪಡಿಸಲಾಗಿದೆ ಎಂಬುದಾಗಿ ನ್ಯಾಯಾಲಯವು ಪರಿಗಣಿಸಬೇಕು ಎಂದು ಪ್ರಾರ್ಥಿಸುತ್ತೇನೆ.

<u>ಪಾಟೀಸವಾಲು- ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್. ವಕೀಲರಿಂದಃ</u>

4. ಈ ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರು ಸಲ್ಲಿಸಿರುವ ದಾಖಲೆಗಳನ್ನು ನಾನು ನೋಡಿದ್ದೇನೆ.

5. ಪೊಲೀಸ್ ದಾಖಲೆಗಳ ಪ್ರಕಾರ ಅಪಘಾತವು ದಿನಾಂಕ 23-11-2018 ರಂದು ಸಂಜೆ 6.30 ರ ವೇಳೆಗೆ ಆಗಿದೆ.

6. ಅಪಘಾತ ಆದ 24 ಗಂಟೆಗಳ ಒಳಗಾಗಿ ರಾಜೇಶ್ ನ ತಾಯಿಯು ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ಒಂದು ದಿನ ಆದ ಮೇಲೆ ಕೊಟ್ಟಿದ್ದಾರೆ.

7. KA-45-A-1611 ಸಂಖ್ಯೆಯ ವಾಹನದಿಂದ ಅಪಘಾತವು ಆಗಿದೆ ಎಂದು ಪೊಲೀಸ್ ದಾಖಲೆಯಲ್ಲಿ ನಮೂದು ಇದೆ ಎಂದರೆ ಸರಿ. ಅಪಘಾತವು ಮಲ್ಲೇಶ್ ರವರ ಮಗ ಮಂಜುನಾಥ ಎಂಬುವವನ ತಪ್ಪಿನಿಂದ ಆಗಿದೆ ಎಂಬುದಾಗಿ ಪ್ರಥಮ ಮಾಹಿತಿಯಲ್ಲಿ ಮತ್ತು ಪ್ರಥಮ ಮಾಹಿತಿ ವರದಿಯಲ್ಲಿ ನಮೂದಾಗಿದೆ ಎಂದರೆ ಸರಿ.

8. ತನಿಖೆಯನ್ನು ಮಾಡಿದ ನಂತರ ಹಲವಾರು ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡ ನಂತರ ಪೊಲೀಸಿನವರು ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಮತ್ತು ಅಂತಿಮ ವರದಿಯಲ್ಲಿ ಮಲ್ಲೇಶನ ಮಗ ಮಂಜುನಾಥನ ತಪ್ಪಿನಿಂದಲೇ ಅಪಘಾತವು ಆಗಿದೆ ಎಂಬುದಾಗಿ ಆರೋಪ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಅದು ಸುಳ್ಳು ಆರೋಪ ಆಗಿದೆ ಎಂಬುದು ನಮ್ಮ ನಿಲುವು ಆಗಿದೆ" ಎಂದು ನುಡಿದಿದ್ದಾರೆ.

9. ಈ ಅಪಘಾತಕ್ಕೆ ಸಂಬಂಧಪಟ್ಟ ಹಾಗೇ ನಮ್ಮ ಕಂಪನಿಯಿಂದ ನಾವು investigation ಮಾಡಿಸಿದ್ದೇವೆ ಎಂದರೆ ಸರಿ. ನಮ್ಮ ಕಂಪನಿಯಿಂದ ನಾವು ಮಾಡಿಸಿದ investigation ವರದಿಯು ಬಂದ ನಂತರ ಆ ಸಂಬಂಧವಾಗಿ ನಾವು ಪೊಲೀಸ್ ಎಸ್.ಪಿ. ರವರಿಗೆ ದೂರು ಕೊಟ್ಟಿದ್ದೇವೆ.

10. ಆ ರೀತಿ ನಾವು ಪೊಲೀಸ್ ಎಸ್.ಪಿ. ರವರಿಗೆ 2022 ನೇ ಇಸವಿಯಲ್ಲಿ ದೂರು ಕೊಟ್ಟಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಆ ವಿಷಯವು ನಮ್ಮ ಗಮನಕ್ಕೆ ಬಂದ ನಂತರ ದುೂರು ಕೊಡಲಾಯಿತು" ಎಂದು ನುಡಿದಿದ್ದಾರೆ.

11. ಅಪಘಾತವು ದಿನಾಂಕ 23-11-2018 ರಂದು ಆಗಿದೆ ಎಂದರೆ ಸರಿ. ಅಪಘಾತವು ಆದ ನಾಲ್ಕು ವರ್ಷಗಳ ನಂತರ ನಾವು ಆ ರೀತಿ ಪೊಲೀಸ್ ಎಸ್.ಪಿ. ರವರಿಗೆ ದೂರು ಕೊಟ್ಟಿದ್ದೇವೆ ಎಂದರೆ ಸರಿ. ನಾವು ಕೊಟ್ಟ ದೂರಿನ ಮೇರೆಗೆ ಪೊಲೀಸ್ ಎಸ್.ಪಿ. ರವರು ನಮಗೆ ಯಾವುದೇ ಹಿಂಬರಹವನ್ನು ಕೊಟ್ಟಿರುವುದಿಲ್ಲ.

12. KA-45-A-1611 ವಾಹನವು ಲಘು ಸರಕು ಸಾಗಾಣಿಕೆ ವಾಹನ ಆಗಿದೆ ಎಂದರೆ ಸರಿ. ಸದರಿ ವಾಹನದ ನಿವ್ವಳ ತೂಕವು 1426 ಕೆ.ಜಿ. ಆಗಿದೆ ಎಂದರೆ ಸರಿ.

13. ಆರ್.ಸಿ. ಪುಸ್ತಕದಲ್ಲಿ ಮತ್ತು ವಿಮಾ ಪಾಲಿಸಿಯಲ್ಲಿ ಇರುವ ಮಾಹಿತಿಯ ಪ್ರಕಾರ KA-45-A-1611 ವಾಹನದಲ್ಲಿ ಚಾಲಕ ಮತ್ತು ಆತನ ಜೊತೆಯಲ್ಲಿ ಇಬ್ಬರು ಆ ವಾಹನದಲ್ಲಿ ಹೋಗಲು ಅನುಮತಿ ಇದೆ ಎಂದರೆ ಕೇವಲ ಚಾಲಕ ಮತ್ತು ಆತನ ಜೊತೆಯಲ್ಲಿ ಒಬ್ಬ ವ್ಯಕ್ತಿ ಹೋಗಲು ಅನುಮತಿ ಇದೆ.

14. KA-45-A-1611 ವಾಹನಕ್ಕೆ ನೀಡಿದ ವಿಮಾ ಪಾಲಿಸಿಯು Package Policy ಆಗಿದೆ ಎಂದರೆ ಸರಿ. ಕರ್ನಾಟಕ ಮೋಟಾರ್ ನಿಯಮಗಳು,--ನಿಯಮ -100 ಪ್ರಕಾರ ಒಂದು ವಾಹನದ ನಿವ್ವಳ ತೂಕವು 990 ಕೆ.ಜಿ. ಗಿಂತ ಜಾಸ್ತಿ ಇದ್ದಾಗ ಅಂತಹ ವಾಹನದಲ್ಲಿ ಮೂರು ಜನ ಪ್ರಯಾಣ ಮಾಡಬಹುದು ಎಂದು ನಿಯಮ ಇದೆ ಎಂದರೆ ಹೇಳಲು ನೆನಪಿಲ್ಲ.

15. ನಿಆರ್-4 ಎಂದು ಗುರುತು ಆಗಿರುವ ವಿಮಾ ಪಾಲಿಸಿಯ ಪ್ರಕಾರ IMT-28-ರ ಅಡಿಯಲ್ಲಿ ನಾವು Extra premium ಪಡೆದುಕೊಂಡಿದ್ದೇವೆ ಎಂದರೆ ಸುಳ್ಳು.

16. ಒಂದು ಸರಕು ಸಾಗಾಣಿಕೆ ವಾಹನದಲ್ಲಿ (Goods vehicle) ನಲ್ಲಿ ಚಾಲಕ ಮತ್ತು ವಾಹನದ ಮಾಲೀಕರ ಅನುಮತಿಯ ಮೇರೆಗೆ ಒಬ್ಬ ಕ್ಲೀನರ್ ಮತ್ತು ಒಬ್ಬ ಹೆಲ್ಪರ್ ಅಥವಾ ಒಟ್ಟು ಮೂರು ಜನ ಕೂಲಿ ಆಳುಗಳನ್ನು ಕರೆದುಕೊಂಡು ಹೋಗಬಹುದು ಎಂದರೆ ಸುಳ್ಳು.

17. ಈ ಪ್ರಕರಣದಲ್ಲಿ ಇರುವ ಅರ್ಜಿದಾರರನ್ನು ನಾನು ಖುದ್ದಾಗಿ ಭೇಟಿ ಮಾಡಿ ವಿಚಾರಣೆ ಮಾಡಿರುವುದಿಲ್ಲ. ನಮ್ಮ ಸಂಸ್ಥೆಯಿಂದ ಕಳುಹಿಸಿದ ತನಿಖಾ ತಂಡದವರು ಈ ಪ್ರಕರಣದ ಅರ್ಜಿದಾರರನ್ನು ಭೇಟಿ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೋ ಹೇಗೆ ಎಂದರೆ ಭೇಟಿ ಮಾಡಿದ್ದಾರೆ ಮತ್ತು ಮಾತನಾಡಿದ್ದಾರೆ ಆದರೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

18. ತನಿಖೆಯನ್ನು ಇದೇ ರೀತಿ ಮಾಡಬೇಕು ಎಂದು ನಾವು ನಮ್ಮ ತನಿಖಾ ತಂಡಕ್ಕೆ ಸೂಚನೆ ನೀಡಿರುತ್ತೇವೆ ಎಂದರೆ ಸುಳ್ಳು.

19. ಪೊಲೀಸ್ ದಾಖಲೆಗಳ ಪ್ರಕಾರ ರಾಜೇಶನು ಶುಂಠಿ ಬೆಳೆಯ ಜೊತೆ ಬೆಳೆದಿದ್ದ ಕಳೆ ಗಿಡಗಳನ್ನು ಕೀಳುವ ಕೆಲಸವನ್ನು ಮುಗಿಸಿ ವಾಪಸ್ಸು ಮನೆಗೆ ಹೋಗುವ ಸಮಯದಲ್ಲಿ ಅಪಘಾತವು ಆಗಿದೆ ಎಂದು ನಮೂದು ಇದೆ.

20. ನಮ್ಮ ತನಿಖಾ ತಂಡದವರು ಮಂಜುನಾಥ ಮತ್ತು ಆ KA-45-A-1611 ವಾಹನದ ಮಾಲೀಕರಾದ ಮೋಹನ ಮತ್ತು ಅಪಘಾತದಲ್ಲಿ ಗಾಯ ಗೊಂಡಿದ್ದ ಇತರೆ ವ್ಯಕ್ತಿಗಳನ್ನು ಭೇಟಿ ಮಾಡಿ ವಿಚಾರಣೆ ಮಾಡಿದ್ದಾರೋ ಹೇಗೆ ಎಂದರೆ ಮಂಜುನಾಥನು ಮತ್ತು ಮೋಹನನು ನಮ್ಮ ತನಿಖಾ ತಂಡದವರಿಗೆ ಸಿಕ್ಕಿರುವುದಿಲ್ಲ ಆದರೆ ಓರ್ವ ಸಾಗರ್ ಎನ್ನುವವರ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಆ ಸದರಿ ಸಾಗರ್ ಎನ್ನುವವರು ಆ ಅಪಘಾತದಲ್ಲಿ ಗಾಯಗೊಂಡಿರುವ ಒಬ್ಬ ವ್ಯಕ್ತಿ ಆಗಿದ್ದಾನೆ.

21. ಸಾಗರ್ ಎನ್ನುವವನಿಗೆ ತಲೆಗೆ ಹೊಡೆತ ಬಿದ್ದು ಆತನು ಹಾಸಿಗೆ ಹಿಡಿದು ಮಲಗಿದ್ದನು ಎಂದರೆ ಸುಳ್ಳು.

22. ಸಾಗರ್ ಎನ್ನುವ ಗಾಯಾಳುವು ಸುಮಾರು ಒಂದೂವರೆ ವರ್ಷಗಳ ಕಾಲ ಅರೆ ಪ್ರಜ್ಞಾವಸ್ಥೆಯಲ್ಲಿಯೇ ಇದ್ದನು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತನಿಖಾ ತಂಡದವರು ಯಾವ ದಿನಾಂಕದಂದು ನಮಗೆ ವರದಿಯನ್ನು ಕೊಟ್ಟಿದ್ದಾರೆ ಎಂದರೆ ಪ್ರಾಯಶಃ 01-09-2022 ರಂದು ನೀಡಿರಬಹುದು, ಆದರೆ ನಿರ್ದಿಷ್ಟವಾಗಿ ದಿನಾಂಕ ಹೇಳಲು ಆಗುವುದಿಲ್ಲ.

23. ನಿಆರ್-5 ದಾಖಲೆಯಲ್ಲಿ 15-09-2020 ಎಂದು ದಿನಾಂಕ ನಮೂದು ಮಾಡಲಾಗಿದೆ ಎಂದರೆ ಸರಿ.

24. ನಿಆರ್-5 ದಾಖಲೆಯನ್ನು ನಮ್ಮ ತನಿಖಾ ತಂಡದವರು ಕೊಟ್ಟ ತಕ್ಷಣ ನಾವು ಪೊಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ಆ ರೀತಿ ದೂರನ್ನು ನೀಡಲು ನಮಗೆ ತೊಂದರೆ ಇರಲಿಲ್ಲ.

25. ಅಪಘಾತದ ಸಮಯದಲ್ಲಿ ಸದರಿ ವಾಹನವನ್ನು ಅಂದರೆ KA-45-A-1611 ಸಂಖ್ಯೆಯ ವಾಹನವನ್ನು ಮಲ್ಲೇಶನ ಮಗ ಮಂಜುನಾಥನೇ ಚಾಲನೆ ಮಾಡುತ್ತಾ ಇದ್ದನು ಮತ್ತು ಮೋಹನ ಎಂಬುವವನು ಚಾಲನೆ ಮಾಡುತ್ತಾ ಇರಲಿಲ್ಲ ಎಂದರೆ ಸುಳ್ಳು.

26. ಮೋಹನ ಮತ್ತು ಮಂಜುನಾಥ ರವರು ಸ್ವಂತ ಅಣ್ಣ ತಮ್ಮಂದಿರು ಆಗಿದ್ದಾರೆ ಎಂದರೆ ಸರಿ.

27. ದಿನಾಂಕ 23-11-2018 ರಂದು ಆಗಿರುವ ಅಪಘಾತದಲ್ಲಿ ಗಾಯಗೊಂಡಿರುವ ಇತರೆ ಗಾಯಾಳುಗಳು ಪಿರಿಯಾಪಟ್ಟಣದ ನ್ಯಾಯಾಲಯದಲ್ಲಿ ಪರಿಹಾರಕ್ಕಾಗಿ ಅರ್ಜಿಗಳನ್ನು ಸಲ್ಲಿಸಿದ್ದರು ಮತ್ತು ಆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆಯು ಇರುವುದಿಲ್ಲ.

28. ಮೇಲೆ ಹೇಳಿದ ಸಾಗರ್ ಎಂಬ ವ್ಯಕ್ತಿಯು ಪರಿಹಾರಕ್ಕಾಗಿ ಪ್ರಕರಣವನ್ನು ಸಲ್ಲಿಸಿದ್ದಾನೋ ಅಥವಾ ಇಲ್ಲವೋ ಎಂದರೆ ದಾಖಲೆಗಳನ್ನು ನೋಡದೆ ಹೇಳಲು ಸಾಧ್ಯವಿಲ್ಲ.

29. ಪಿರಿಯಾಪಟ್ಟಣ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಕರಣಗಳಲ್ಲಿ ಯಾವ ವ್ಯಕ್ತಿಗಳನ್ನು ಎದುರುದಾರರನ್ನಾಗಿ ಮಾಡಲಾಗಿದೆ ಎಂದು ದಾಖಲೆಗಳನ್ನು ನೋಡದೆ ಹೇಳಲು ಸಾಧ್ಯವಿಲ್ಲ. ಆ ದಾಖಲೆಗಳನ್ನು ಹಾಜರು ಮಾಡಲು ನಮಗೆ ಯಾವುದೇ ತೊಂದರೆಯು ಇರುವುದಿಲ್ಲ.

30. ಅಪಘಾತದ ಸಮಯದಲ್ಲಿ ಅರ್ಜಿದಾರರ ಮಗನಾದ ರಾಜೇಶ ಎನ್ನುವವನು KA-45-A-1611 ಸಂಖ್ಯೆಯ ವಾಹನದಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಾ ಇದ್ದನು ಎಂದರೆ ಸುಳ್ಳು.

31. KA-45-A-1611 ವಾಹನದ ಮಾಲೀಕರು ಡ್ಯಾಮೇಜಸ್ ಗಾಗಿ| ಅರ್ಜಿಯನ್ನು ಸಲ್ಲಿಸಿದ್ದಾರೋ ಇಲ್ಲವೋ ಎಂದು ಹೇಳಲು ನೆನಪಿಲ್ಲ. ನಮ್ಮ ತನಿಖಾ ತಂಡದವರಿಗೆ ಸಾಗರ್ ರವರ ಹೇಳಿಕೆಯನ್ನು ಆಡಿಯೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಬೇಕು ಎಂದು ಸೂಚನೆಯನ್ನು ಕೊಡಲಾಗಿತ್ತು.

32. ತನಿಖೆ ಮಾಡುವ ಸಮಯದಲ್ಲಿ ಆಡಿಯೋ ಮತ್ತು ವಿಡಿಯೋ ಮಾಡಬೇಕು ಎಂದು ನಾವು ನಮ್ಮ ತನಿಖಾ ತಂಡದವರಿಗೆ mail ಮೂಲಕ ಸೂಚನೆಯನ್ನು ನೀಡಿದ್ದೆವು. ಆ mail ಪ್ರತಿಯನ್ನು ಹಾಜರು ಮಾಡಲು ನಮಗೆ ತೊಂದರೆ ಇಲ್ಲ.

33. ಈ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ವಿಚಾರಣೆ ಎಲ್ಲವೂ ಮುಗಿದ ನಂತರ ನಮ್ಮ ಅನುಕೂಲಕ್ಕೆ ತಕ್ಕ ಹಾಗೇ 2022 ನೇ ಇಸವಿ ಡಿಸೆಂಬರ್ ನಲ್ಲಿ ನಮ್ಮ ಸಂಸ್ಥೆಯಿಂದ ಪೊಲೀಸರಿಗೆ ದೂರು ಕೊಟ್ಟಿದ್ದೇವೆ ಎಂದರೆ ಸುಳ್ಳು.

34. ಅರ್ಜಿದಾರರಿಗೆ ಪರಿಹಾರವನ್ನು ಕೊಡಬೇಕಾದ ಜವಾಬ್ದಾರಿಯು ನಮ್ಮ ಸಂಸ್ಥೆಯ ಮೇಲೆ ಇದೆ ಮತ್ತು ಹಾಗಿದ್ದರೂ ಸಹಾ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

35. ಪೊಲೀಸರು ಸಲ್ಲಿಸಿರುವ ಅಂತಿಮ ವರದಿಯನ್ನು ಅಸಿಂಧು ಎಂದು ಘೋಷಿಸಬೇಕು ಎಂದು ಹೇಳಿ ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣವನ್ನು ಸಲ್ಲಿಸಿಲ್ಲ.

36. ಅಪಘಾತದ ಸಮಯದಲ್ಲಿ ಅರ್ಜಿದಾರರ ಮಗನಾದ ರಾಜೇಶನು ಸದರಿ ವಾಹನದಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಾ ಇದ್ದನು ಮತ್ತು ಆತನು ಪುಕ್ಕಟೆ ಪ್ರಯಾಣಿಕ (gratuitous passenger) ಆಗಿರಲಿಲ್ಲ ಎಂದರೆ ಸುಳ್ಳು.

37. ನಾವು ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

**<u>ಪಾಟೀಸವಾಲು 1 ನೇ ಎದುರುದಾರರ ಪರವಾಗಿ ಶ್ರೀ ಬಿ.ಎಸ್.ಆರ್. ವಕೀಲರಿಂದಃ</u>**

38. 1 ನೇ ಎದುರುದಾರರು ಮತ್ತು 2 ನೇ ಎದುರುದಾರರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಗಮನಿಸಿದರೇ ಈ ಇಬ್ಬರೂ ಎದುರುದಾರರ ಮಧ್ಯೆ ವೈರುಧ್ಯಾ ಹಿತಾಶಕ್ತಿ (conflict of interest) ಇದೆ ಎಂಬುದು ಕಂಡು ಬರುತ್ತದೆ. ಆದಕಾರಣದಿಂದ 1 ನೇ ಎದುರುದಾರರ ಪರ ವಕೀಲರಿಗೆ ಈ ಸಾಕ್ಷಿದಾರರನ್ನು ಪಾಟೀಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.

39. ಸಾಗರ್ ಬಿನ್ ಗೋವಿಂದ ರಾಜ್ ಎನ್ನುವವರು ಪಿರಿಯಾಪಟ್ಟಣ ನ್ಯಾಯಾಲಯದಲ್ಲಿ MVC 466/2021 ಪ್ರಕರಣವನ್ನು ಸಲ್ಲಿಸಿದ್ದಾರೆ ಮತ್ತು ಆ ಪ್ರಕರಣವು ವಿಚಾರಣೆಗೆ ಬಾಕಿ ಇದೆ ಮತ್ತು ಆ ಪ್ರಕರಣದಲ್ಲಿ ನಮ್ಮ ಸಂಸ್ಥೆಯನ್ನು 2 ನೇ ಎದುರುದಾರರನ್ನಾಗಿ ತೋರಿಸಲಾಗಿದೆ ಎಂದರೆ ಸರಿ.

40. ಸದರಿ MVC 466/2021 ಪ್ರಕರಣದ ಅರ್ಜಿಯನ್ನು ಮತ್ತು ಸಾಗರ್ ರವರ ಸಾಕ್ಷಿ ಪ್ರಮಾಣ ಪತ್ರದ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದಾರೆ ಮತ್ತು ಈ ಸಾಕ್ಷಿದಾರರಿಗೆ ಮುಖಾಬಲೆ (confront) ಮಾಡಿದ್ದಾರೆ. ಆದರೆ ಈ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ ಈ ದಾಖಲೆಗಳು ಈ ಸಾಕ್ಷಿದಾರರ ಹಿಂದಿನ ಹೇಳಿಕೆ (previous statement) ವ್ಯಾಪ್ತಿಯ ಅಡಿಯಲ್ಲಿ ಬರುವುದಿಲ್ಲ ಮತ್ತು ಈ ಸಾಕ್ಷಿದಾರರು ಈ ದಾಖಲೆಗಳಿಗೆ ಸಾಕ್ಷಿದಾರರಾಗಿಲ್ಲ ಅಥವಾ ಕರ್ತೃ ಆಗಿರುವುದಿಲ್ಲ. ಈ ಎಲ್ಲಾ ಕಾರಣದಿಂದ ILR 1999 ಕರ್ನಾಟಕ ಪುಟ ಸಂಖ್ಯೆ 4634 (ಅಮರ್ ನಾಥ್ ವಿರುದ್ಧ ಪುಟ್ಟಮ್ಮ) ಪ್ರಕರಣದಲ್ಲಿ ವಿಷಧಿಕರಿಸಿರುವ ಕಾನೂನಿನ ಅಂಶದಂತೆ ಈ ದಾಖಲೆಗಳನ್ನು ಕೇವಲ identification ಉದ್ದೇಶಕ್ಕಾಗಿ ನಿಎಸ್**-1** ಮತ್ತು ನಿಎಸ್**-2** ಎಂದು ಗುರುತಿಸಿದೆ.

41. ಶ್ರೀ ಬಿ.ಎಸ್.ಆರ್. ವಕೀಲರು ಉಳಿದಂತೆ ಅರ್ಜಿದಾರರ ಪರ ವಕೀಲರು ಮಾಡಿರುವ ಪಾಟೀಸವಾಲನ್ನೇ ತಾವು ಸಹಾ ಅಳವಡಿಸಿಕೊಳ್ಳುತ್ತೇವೆ ಎಂದು ನುಡಿದಿದ್ದಾರೆ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.